## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀಕಂಠ | ಪಿಡಬ್ಲ್ಯೂ : 23 |
| ತಂದೆಯ / ಗಂಡನ ಹೆಸರು | : ಮುದ್ದಯ್ಯ | ಸಿಡಬ್ಲ್ಯೂ : 44 |
| ವಯಸ್ಸು | : 52 ವರ್ಷ | |
| ಉದ್ಯೋಗ | : ಮುಖ್ಯ ಪೇದೆ , ಮಂಡಿ ಪೋಲೀಸ್ ಠಾಣೆ , ಮೈಸೂರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 24.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಸೆಪ್ಟಂಬರ್ 2015 ರಿಂದ ಜುಲೈ 2024 ರವರೆಗೆ ನಾನು ಮೈಸೂರಿನ ಎನ್ ಆರ್ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣದಲ್ಲಿ ನಾನು ತನಿಖಾಧಿಕಾರಿಯವರ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೆ. ದಿಃ 24.12.2020 ರಂದು ಠಾಣೆಯಲ್ಲಿ ಜಯಸೂರ್ಯನ ಮೊಬೈಲ್ ನ್ನು ಅಮಾನತ್ತು ಪಡಿಸಿಕೊಳ್ಳಬೇಕು ಎಂದು , ನನ್ನನ್ನು ಆ ಅಮಾನತ್ತು ಮಹಜರ್ ನ್ನು ಟೈಪ್ ಮಾಡುವ ಸಲುವಾಗಿ ಕೂರಿಸಿಕೊಂಡರು. ಜಯ ಸೂರ್ಯ ಅಂದರೆ ಚಾ,ಸಾ. 14 ಠಾಣೆಗೆ ಬಂದು ತನ್ನ ಮೊಬೈಲನ್ನು ಹಾಜರುಪಡಿಸಿದ. ಆ ಮೊಬೈಲ್ ವಿವೋ ಕಂಪನಿಯದ್ದಾಗಿತ್ತು. ಸಿಲ್ವರ್ ಬಣ್ಣದ್ದಾಗಿತ್ತು. ಅದರಲ್ಲಿ ಏರ್ ಟೆಲ್ ಕಂಪನಿಯ ಸಿಮ್ ಇತ್ತು ಎಂದು ತಿಳಿಸಿದರು.

ಅದರ ಕೊನೆಯ ನಂಬರ್ ....028 ಆಗಿತ್ತು. 1 ನೇ ಆರೋಪಿ ತನ್ನ ಮೊಬೈಲ್ ಗೆ ದಿಃ 15.12.2020 ರಂದು ರಾತ್ರಿ 02.55 ರಿಂದ 02.56 ರ ನಡುವೆ 3 ಪೋಟೋಗಳು ಮತ್ತು 3 ಮೆಸೇಜ್ ಗಳನ್ನು ಕಳುಹಿಸಿರುತ್ತಾನೆ ಎಂದು ಜಯ ಸೂರ್ಯ ತಿಳಿಸಿದ. ಪಂಚರ ಸಮಕ್ಷಮ ಆ ಪೋಟೋಗಳು ಮತ್ತು ಮೆಸೇಜ್ ನ್ನು ತೋರಿಸಲು ಆತನಿಗೆ ತಿಳಿಸಿದರು. ಆ ಮೂರು ಪೋಟೋಗಳಲ್ಲಿ 1 ನೇ ಆರೋಪಿ ಮೃತನ ಎದೆಯ ಮೇಲೆ ಕುಳಿತು ಕುತ್ತಿಯನ್ನು ಟವೆಲ್ ನಿಂದ ಬಿಗಿಯುತ್ತಿರುವ ಚಿತ್ರಗಳಿದ್ದವು. ಮೆಸೇಜ್ ಇಂಗ್ಲಿಷ್ ನಲ್ಲಿತ್ತು. **"Muguitu kathe"** ಮತ್ತು **"Avanadu"** ಮತ್ತು **"Dont worry Jayasurya"** ಎಂದಿದ್ದವು. ಈ ಮೂರು ಮೆಸೇಜ್ ಗಳು ಮತ್ತು ಪೋಟೋಗಳು 1 ನೇ ಆರೋಪಿ ವಿನಯ್ ಪರೋಟಾ ನ ಮೊಬೈಲ್ ನಿಂದ ಜಯಸೂರ್ಯನ ಮೊಬೈಲ್ ಗೆ ಬಂದಿದ್ದವು. 1 ನೇ ಆರೋಪಿ ವಿನಯ್ ಪರೋಟಾ ನ ಮೊಬೈಲ್ ಸಂಖ್ಯೆ 8660343740 ಆಗಿತ್ತು. ಆ ಮೊಬೈಲನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡರು. ನಂತರ ಒಂದು ಬಿಳಿಯ ಬಟ್ಟೆಯಲ್ಲಿ ಹಾಕಿ , ಕಟ್ಟಿ , **M** ಎನ್ನುವ ಮೊಹರನ್ನು ಹಾಕಿದರು. ಅದರ ಮೇಲೆ ತನಿಖಾಧಿಕಾರಿ ಮತ್ತು ಪಂಚರು ಸಹಿ ಮಾಡಿದ ಚೀಟಿಯನ್ನು ಅಂಟಿಸಿದರು. ಈ ಮಹಜರ್ ನ್ನು ನಾನೇ ಟೈಪ್ ಮಾಡಿರುತ್ತೇನೆ. ನಾನು ಟೈಪ್ ಮಾಡಿದ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 22 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆ ದಿನ ಅಮಾನತ್ತು ಪಡಿಸಿಕೊಂಡ ಮೊಬೈಲನ್ನು ಇಂದು ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸದರಿ ಪೋಟೋಗಳನ್ನು ನಾನು ಈಗ

ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 14 ರಿಂದ 17 ಎಂದು ಗುರುತುಪಡಿಸಿಕೊಳ್ಳಲಾಗಿದೆ.

3. ದಿಃ 02.01.2021 ರಂದು ಅಶೋಕಪುರಂ ಪೋಲೀಸ್ ಠಾಣೆಯ ಮೊದಲನೇ ಮಹಡಿಯಲ್ಲಿರುವ ಸೈಬರ್ ಕ್ರೆಂ ಪೋಲೀಸ್ ಠಾಣೆಗೆ ಮೋಹನ್ ಮತ್ತು ಶಶಿಕುಮಾರ್ ಎನ್ನುವ ಪಂಚರೊಂದಿಗೆ ತನಿಖಾಧಿಕಾರಿಯವರು ನನ್ನನ್ನು ಸಹ ಕರೆದುಕೊಂಡು ಹೋದರು. ದಿಃ 24.12.2020 ರಂದು ಅಮಾನತ್ತು ಪಡಿಸಿಕೊಂಡಿದ್ದ ಜಯ ಸೂರ್ಯನ ಮೊಬೈಲನ್ನು ಅಲ್ಲಿ ನೀಡಿ , ಮೊಬೈಲ್ ನಲ್ಲಿ ಇರುವ ಮಾಹಿತಿಯನ್ನು ಎಕ್ಸ್ ಟ್ರಾಕ್ಟ ಮಾಡಬೇಕು , ಪಂಚರ ಸಮಕ್ಷಮ ಎಂದು ಹೇಳಿ ನನ್ನನ್ನು ಸದರಿ ಮಹಜರ್ ನ್ನು ಟೈಪ್ ಮಾಡಿಸಿಸಲು ಕೂರಿಸಿಕೂಂಡರು. ನಾನು ಸೈಬರ್ ಕ್ರೆಂ ಪೋಲೀಸ್ ಠಾಣೆಯಲ್ಲಿ ಇದ್ದಂತಹ ಕಂಪ್ಯೂಟರ್ ಸಿಟ್ಟಂ ನಲ್ಲೇ ಮಹಜರ್ ನ್ನು ಟೈಪ್ ಮಾಡಿರುತ್ತೇನೆ. ಆ ಮೊಬೈಲ್ ನ್ನು ಆ ಠಾಣೆಗೆ ತೆಗೆದುಕೊಂಡು ಹೋದಾಗ **M** ಮೊಹರಿನಿಂದ ಸೀಲಾಗಿತ್ತು. ನಂತರ ಅದನ್ನು ತೆಗೆದು, ಮೊಬೈಲನ್ನು ಅದರಿಂದ ಹೊರ ತೆಗೆದು, ಚಾ.ಸಾ. 36 ರವರು ಆ ಮೊಬೈಲನ್ನು ತೆಗೆದು ಪರಿಶೀಲಿಸಿದಾಗ ಅದು ಸ್ವಿಚ್ ಆಫ್ ಆಗಿತ್ತು. ಸ್ವಿಚ್ ಆನ್ ಆದಾಗ ಅದು **Flight mode** ನಲ್ಲಿತ್ತು. ನಂತರ ಅದರಲ್ಲಿನ ವ್ಯಾಟ್ಸ್ ಅಪ್ ಆ್ಯಪ್ ಗೆ ಹೋಗಿ ಪರಿಶೀಲಿಸಿದಾಗ ಅದರಲ್ಲಿ **"Vinu anna"** ಎಂದಿದ್ದ ಹೆಸರಿನ ಮಾಹಿತಿಯನ್ನು ತೆರೆದಾಗ ಅದರಲ್ಲಿ ಮೇಲೆ ಹೇಳಿದ 3 ಪೋಟೋಗಳು ಮತ್ತು ಮೇಲೆ ಹೇಳಿದ 3 ಮೆಸೇಜ್ ಗಳು ಇದ್ದವು. ತನಿಖಾಧಿಕಾರಿಯವರು ಅದರ ಎಕ್ಸ್ ಟ್ರಾಕ್ಟ ನ್ನು ತೆಗೆದುಕೊಡಬೇಕು ಎಂದು ಮಧು ರವರಲ್ಲಿ ಕೇಳಿದರು. ಆ ಠಾಣೆಯಲ್ಲಿ ಇದ್ದಂತಹ **Anti Analysis System** ಗೆ ಕನೆಕ್ಟ ಮಾಡಿ **U Fed softwear** ಮೂಲಕ

ಪೋಟೋಗಳು ಮತ್ತು ಮೆಸೇಜನ್ನು ಎಕ್ಸ್ ಟ್ರಾಕ್ಟ ಮಾಡಿ, ಆ ಮಾಹಿತಿಯನ್ನು ತನಿಖಾಧಿಕಾರಿಗೆ ನೀಡಿದರು. ಈ ಎಕ್ಸ್ ಟ್ರಾಕ್ಟ ನ್ನು ಸಂಜೆ 06.30 ರಿಂದ 07.50 ರವರೆಗೆ ಮಾಡಿದರು. ನಂತರ ಪುನಃ ಆ ಮೊಬೈಲನ್ನು ಜೋಡಿಸಿ ಬಿಳಿ ಬಣ್ಣದ ಬಟ್ಟೆಯ ಪ್ಯಾಕೆಟ್ ನಲ್ಲಿ ಹಾಕಿ ಬಾಯಿ ಮುಚ್ಚಿ, **M** ಎಂ ಅಕ್ಷರದಿಂದ ಮೊಹರು ಮಾಡಿ ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಅದನ್ನು ವಸ್ತು ಸಂಖ್ಯೆ **Q**1 ಎಂದು ನಮೂದಿಸಿದರು. ನಂತರ ಅದರ ಮೇಲೆ ಪಂಚರು ಹಾಗೂ ತನಿಖಾಧಿಕಾರಿಗಳು ಸಹಿ ಮಾಡಿದ ಚೀಟಿಯನ್ನು ಅಂಟಿಸಿದರು. ಈ ಬಗ್ಗೆ ಮಾಡಿದ ಮಹಜರ್ ನ್ನು ಖುದ್ದು ನಾನು ಟೈಪ್ ಮಾಡಿರುತ್ತೇನೆ. ಮತ್ತು ನನ್ನ ಸಹಿ ಹಾಕಿರುತ್ತೇನೆ. ಸದರಿ ಮಹಜರ್ ನ್ನು ಈಗಾಗಲೇ ನಿಪಿ 29 ಎಂದು ಗುರುತುಪಡಿಸಿಕೊಳ್ಳಲಾಗಿರುತ್ತದೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದರು. ಈಗ ನೋಡುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ 30 ಮತ್ತು 31 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸದರಿ ಮೊಬೈಲನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 11 ಎಂದು ಗುರುತುಪಡಿಸಿಕೊಳ್ಳಲಾಗಿದೆ.

4. ದಿಃ 10.02.2021 ರಂದು 1 ನೇ ಆರೋಪಿ ನಮ್ಮ ಠಾಣೆಯಲ್ಲಿ ಹಾಜರುಪಡಿಸಿದ ತನ್ನ ಮೊಬೈಲನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡರು. ಆ ಸಮಯದಲ್ಲಿ ಮಹಜರ್ ಮಾಡಿದ ಬಾಬ್ತು ಟೈಪ್ ಮಾಡಲು ನನ್ನನ್ನು ನೇಮಿಸಿಕೊಂಡರು. ರಾಜು ಮತ್ತು ಜಾನ್ ಪೀಟರ್ ಎನ್ನುವವರು ಪಂಚರಾಗಿದ್ದರು. ಆ ಮೊಬೈಲ್ ಸ್ಯಾಮಸಂಗ್ ಗ್ಯಾಲಕ್ಸಿ ಎ–21 ಎಸ್ ಆಗಿತ್ತು. ಹಿಂಭಾಗದಲ್ಲಿ ನೀಲಿ ಬಣ್ಣದ ಕವರ್ ಇತ್ತು. ಪಂಚರ ಸಮಕ್ಷಮ ಆ ಮೊಬೈಲನ್ನು ತೆಗೆದು ನೋಡಿದಾಗ ಅದರಲ್ಲಿ ಸಿಮ್ ಕಾರ್ಡ

ಇರಲಿಲ್ಲ. 1 ನೇ ಆರೋಪಿ ಅದರ ಗ್ಯಾಲರಿಯಲ್ಲಿದ್ದ ಪೋಟೋ ಗಳು ಮತ್ತು ಮೆಸೇಜ್ ಗಳನ್ನು ಡಿಲೀಟಿ ಮಾಡಿರುವುದಾಗಿ ತಿಳಿಸಿದ. ಅಲ್ಲದೇ ವ್ಯಾಟ್ಸ್ ಅಪ್ ಆಪ್ ನ್ನು **Uninstall** ಮಾಡಿರುತ್ತೇನೆ ಎಂದು ಸಹ ತಿಳಿಸಿದ. ಸದರಿ ಮೊಬೈಲನ್ನು ತನಿಖಾಧಿಕಾರಿಯವರು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡರು. ಆಗ ಸಮಯ ಬೆಳಿಗ್ಗೆ 11.00 ರಿಂದ 11.30 ಆಗಿತ್ತು. ನಂತರ ಆ ಮೊಬೈಲನ್ನು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ , ಬಾಯಿ ಕಟ್ಟಿ , **M** ಎಂ ಅಕ್ಷರದಿಂದ ಮೊಹರು ಮಾಡಿದರು. ಸದರಿ ಮಹಜರ್ ನ್ನು ನಾನೇ ಟೈಪ್ ಮಾಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 35 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸದರಿ ಮೊಬೈಲನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 12 ಎಂದು ಗುರುತುಪಡಿಸಿಕೊಳ್ಳಲಾಗಿದೆ.

5. ದಿಃ03.03.2021 ರಂದು ತನಿಖಾಧಿಕಾರಿಯವರು 1 ನೇ ಆರೋಪಿಯ ಮೂಲಕ ಒಂದು ಡ್ಯೂಪ್ಲಿಕೇಟ್ ಸಿಮ್ ನ್ನು ಖರೀದಿಸಿದರು. ಆ ಸಿಮ್ ನಂ. 8660343740 ಆಗಿತ್ತು. ಅದು ಕೆಂಪು ಬಣ್ಣದ ಕವರ್ ನಲ್ಲಿದ್ದು , ಜಿಯೋ ಕಂಪನಿಯ ಸಿಮ್ ಆಗಿತ್ತು. ಅದನ್ನು 1 ನೇ ಆರೋಪಿ ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದಾಗ, ಪಂಚರು ಆ ಕವರ್ ನ್ನು ಬಿಚ್ಚಿ, ಸಿಮ್ ನ್ನು ಹೊರ ತೆಗೆದು , 1 ನೇ ಆರೋಪಿಯ ಮೊಬೈಲಿ ಗೆ ಅಳವಡಿಸಿದರು. ನಂತರ ಸೈಬರ್ ಕ್ರೈಂ ಠಾಣೆಯಲ್ಲಿ ಎಕ್ಸ್ ಟ್ರಾಕ್ಟ ಪಡೆಯಲು ಮತ್ತು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ ಒಂದು ಬಿಳಿಯ ಬಣ್ಣದ ಬಟ್ಟೆಯಲ್ಲಿ ಹಾಕಿ, ಬಾಯಿ ಕಟ್ಟಿ **M** ಅಕ್ಷರದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೂಂಡರು. ಅದರ ಮೇಲೆ ಪಂಚರು ಮತ್ತು ತನಿಖಾಧಿಕಾರಿಯ ಸಹಿ ಇರುವ ಚೀಟಿಗಳನ್ನು ಅಂಟಿಸಿದರು. ಆ ಮಹಜರ್ ನ್ನು ಖುದ್ದು ನಾನೇ ಟೈಪ್ ಮಾಡಿರುತ್ತೇನೆ.

ಸದರಿ ಮಹಜರ್ ನ್ನು ಮಧ್ಯಾಹ್ನ 02.00 ರಿಂದ 03.00 ಗಂಟೆಯವರೆಗೆ ಮಾಡಲಾಯಿತು. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 36 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 36(ಬಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಸಮಯದಲ್ಲಿ ಅಲ್ಲಿ ಪೋಟೋಗಳನ್ನು ತೆಗೆದರು. ಅವುಗಳನ್ನು ಈಗ ನೋಡುತ್ತಿದ್ದೇನೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ 37 ಮತ್ತು 38 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಸದರಿ ಮೊಬೈಲನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ಎಂ ಒ 12 ಎಂದು ಗುರುತುಪಡಿಸಿಕೊಳ್ಳಲಾಗಿದೆ.

6. ದಿಃ 06.03.2021 ರಂದು 1 ನೇ ಆರೋಪಿಯ ಮೊಬೈಲ್ ನ ಡಾಟಾ ಎಕ್‌ಸ್ ಟ್ರಾಕ್ಟ ಮಾಡಲು ಪಂಚರನ್ನು ಮತ್ತು ನನ್ನನ್ನು ಸೈಬರ್ ಕ್ರೈಂ ಠಾಣೆಗೆ ಕರೆದುಕೊಂಡು ಹೋದರು. ಅಲ್ಲಿದ್ದ ಮಧು ಚಾ,ಸಾ. 36 ರವರ ಮುಂದೆ ಮೊಬೈಲನ್ನು ತನಿಖಾಧಿಕಾರಿಯವರು ಹಾಜರುಪಡಿಸಿದರು. ಪಂಚರ ಸಮಕ್ಷಮ ಆ ಮೊಬೈಲನ್ನು ತೆಗೆದು ಪರಿಶೀಲಿಸಿದರು. ಆ ಮೊಬೈಲ್ ನಲ್ಲಿ **Setting** ಗೆ ಹೋಗಿ **Developer mode** ಗೆ ಹೋಗಿ ಕೆಲವೊಂದು ಬದಲಾವಣೆಗಳನ್ನು ಮಾಡಿ **Ante Analysis system** ಗೆ ಕನೆಕ್ಟ ಮಾಡಿ **U-Fed softwear** ಮೂಲಕ ಪರಿಶೀಲಿಸಿ ಅದರಲ್ಲಿ ಕೆಲವೊಂದು ಮಾಹಿತಿಗಳು ದೊರೆತಿದ್ದು , ಅದನ್ನು ಪೆನ್ ಡ್ರೈವ್ ಗೆ ವರ್ಗಾಯಿಸಿಕೊಂಡರು. ಡಾಟಾ ಎಕ್ಸ್ ಟ್ರಾಕ್ಟ ನ್ನು ಸಂಜೆ 06.00 ರಿಂದ 07.00 ಗಂಟೆವರೆಗೆ ಮಾಡಿದರು. ಎಫ್ ಎಸ್ ಎಲ್ ಗೆಕಳುಹಿಸುವ ಸಲುವಾಗಿ ಸದರಿ ಮೊಬೈಲ್ ನ್ನು ಪುನಃ ಬಿಳಿಯ ಬಟ್ಟೆಯ ಪ್ಯಾಕ್ ನಲ್ಲಿ ಹಾಕಿ, ಬಾಯಿ ಕಟ್ಟಿ **M** ಅಕ್ಷರದಿಂದ ಮೊಹರು ಮಾಡಿ ಅಮಾನತ್ತು ಪಡಿಸಿಕೂಂಡರು.

ಸದರಿ ಮಹಜರ್ ನ್ನು ನಾನೇ ಟೈಪ್ ಮಾಡಿರುತ್ತೇನೆ. ಸದರಿ ಮಹಜರ್ ನ್ನು ಮಾಡಿದಾಗ ಸಮಯ 06.00 ರಿಂದ 07.00 ಗಂಟೆ ಆಗಿತ್ತು. ಸದರಿ ಮಹಜರ್ ಗೆ ಸಹಿ ಹಾಕಿರುತ್ತೇನೆ. ಸದರಿ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಅದನ್ನು ಈಗಾಗಲೇ ನಿಪಿ 32 ಎಂದು ಗುರುತುಪಡಿಸಿಕೊಳ್ಳಲಾಗಿದ್ದು , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 32(ಸಿ) ಎಂದು ಗುರುತುಪಡಿಸಿಕೊಳ್ಳಲಾಯಿತು. ಆ ಸಮಯದಲ್ಲಿ ಪೋಟೋಗಳನ್ನು ತೆಗೆದರು. ಅವುಗಳನ್ನು ಈಗ ನೋಡುತ್ತಿದ್ದೇನೆ. ಸದರಿ ಪೋಟೋಗಳನ್ನು ನಿಪಿ 33 ಮತ್ತು 34 ಎಂದು ಗುರುತುಪಡಿಸಿಕೂಳ್ಳಲಾಯಿತು. ಈ ಮಹಜರ್ ನಲ್ಲಿ ಕೊನೆಯಲ್ಲಿ ಸಮಯವನ್ನು 06.00 ಗಂಟೆಯಿಂದ 07.00 ಗಂಟೆವರೆಗೆ ಎಂದು ಟೈಪ್ ಮಾಡಬೇಕಿತ್ತು. ಆದರೆ ತಪ್ಪಾಗಿ ಸಮಯವನ್ನು 16.00 ಗಂಟೆಯಿಂದ 17.00 ಗಂಟೆಯವರೆಗೆ ಎಂದು ತಪ್ಪಾಗಿ ಟೈಪ್ ಮಾಡಲಾಗಿತ್ತು.

7. ದಿಃ 02.02.2021 ರಂದು ಚಾ,ಸಾ. 29 ರವರು ಠಾಣೆಯ ಬಳಿಗೆ ಬಂದು ಘಟನಾ ಸ್ಥಳವನ್ನು ತೋರಿಸಿ ಎಂದು ತನಿಖಾಧಿಕಾರಿಯವರನ್ನು ಕೇಳಿದಾಗ, ತನಿಖಾಧಿಕಾರಿಯವರು ಅವರೊಂದಿಗೆ ನನ್ನನ್ನು ಸ್ಥಳ ತೋರಿಸಲು ಕಳುಹಿಸಿದರು. ನಾನು ತನಿಖಾಧಿಕಾರಿಯವರ ಸಹಾಯಕನಾಗಿ ಇದ್ದುದ್ದರಿಂದ ಘಟನಾ ಸ್ಥಳ ನನಗೆ ಗೊತ್ತಿತ್ತು ಮತ್ತು ಕೃತ್ಯ ನಡೆದ ಸ್ಥಳದಿಂದ ನಾನೇ ಪೋಸ್ಟ್ ಮಾರ್ಟಂ ಗಾಗಿ ಜೆ ಎಸ್ ಎಸ್ ಮೆಡಿಕಲ್ ಕಾಲೇಜಿಗೆ ತೆಗೆದುಕೂಂಡು ಹೋಗಿದ್ದೆ. ಆದ್ದರಿಂದ ಚಾ,ಸಾ. 29 ರವರಿಗೆ ಘಟನಾ ಸ್ಥಳವನ್ನು ತೋರಿಸಿದೆ. ಅವರು ಆ ಸದಳವನ್ನು ಪರಿಶೀಲಿಸಿದರು. ಸ್ಥಳದಲ್ಲೇ ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡರು.

**8.** ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**